ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆಃ ಕಾಶಿಇ/ಶೈ ವಿವೇ/24/ಶುಲ್ಕ ವಿನಾಯಿತಿ/2021-22

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಶೇಷಾದ್ರಿ ರಸ್ತೆ, ಬೆಂಗಳೂರು-560001.
ದಿನಾಂಕ: 06.01.2022.

# ಸುತ್ತೋಲೆ

**ವಿಷಯ:** 2021-22ನೇ ಸಾಲಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರ ಶುಲ್ಕ ಮರುಭರಿಕೆ ಬಗ್ಗೆ.

**ಉಲ್ಲೇಖ:** 1) ಸರ್ಕಾರದ ಆದೇಶ ಸಂಖ್ಯೆ: ಇಡಿ 115 ಹೆಚ್‌ಪಿಸಿ 2020 ಬೆಂಗಳೂರು ದಿನಾಂಕ:12.08.2020.

2) ಸರ್ಕಾರದ ಪತ್ರ ಸಂಖ್ಯೆ:ಇಡಿ 91 ಡಿಸಿಇ 2021 (ಇ) ದಿನಾಂಕ:29.07.2021

* * * * * *

ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ, 2021-22ನೇ ಶೈಕ್ಷಣಿಕ ಸಾಲಿನಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿ ತರಗತಿಗಳಿಗೆ ಪ್ರವೇಶ ಪಡೆದು ವ್ಯಾಸಂಗ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿನಿಯರ ಶುಲ್ಕ ಮರುಭರಿಕೆ ಮಾಡುವ ಸಂಬಂಧ ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು, ಅಗತ್ಯ ವಿವರಗಳ ಮಾಹಿತಿಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಅಳವಡಿಸಲಾಗಿರುವ Google Form ನಲ್ಲಿ ಪ್ರಾಂಶುಪಾಲರುಗಳು ವೈಯುಕ್ತಿಕ ಗಮನಹರಿಸಿ ಯಾವುದೇ ಕಾರಣಕ್ಕೂ ವಿಳಂಬವಾಗದಂತೆ ಕಡ್ಡಾಯವಾಗಿ ದಿನಾಂಕ:18.01.2022 ರ ಸಂಜೆ:5.00ರೊಳಗಾಗಿ upload ಮಾಡಲು ಕಟ್ಟುನಿಟ್ಟಾಗಿ ಸೂಚಿಸಲಾಗಿದೆ. ಮುಂದುವರೆದು ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ Excel Sheet ನಲ್ಲಿ ಅರ್ಹರಿರುವ ವಿದ್ಯಾರ್ಥಿನಿಯರ ಮಾಹಿತಿಯನ್ನು ಭರ್ತಿ ಮಾಡುವುದು ಹಾಗೂ ಪ್ರಾಂಶುಪಾಲರು ದೃಢೀಕರಣ ಪತ್ರವನ್ನು ಸಲ್ಲಿಸುವುದು.

**ವಿಶೇಷ ಸೂಚನೆ:**

**ಸ್ನಾತಕ ಪದವಿ ವಿದ್ಯಾರ್ಥಿನಿಯರಿಗೆ ಸಂಬಂಸಿದಂತೆ:**

1. ಶುಲ್ಕ ವಿನಾಯಿತಿಯನ್ನು ಪುನರಾವರ್ತಿತ ವಿದ್ಯಾರ್ಥಿನಿಯರನ್ನು ಹೊರತುಪಡಿಸಿ ಕಾಲೇಜಿಗೆ ಪ್ರವೇಶ ಪಡೆದು ಪ್ರಥಮ ಬಾರಿಗೆ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿನಿಯರಿಗೆ ಮಾತ್ರ ಸೀಮಿತಗೊಳಿಸುವುದು.
2. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ, ಹಿಂದುಳಿದ ಹಾಗೂ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ವಿದ್ಯಾರ್ಥಿನಿಯರು ಸಂಬಂಧಪಟ್ಟ ಇಲಾಖೆ / ಪ್ರಾಧಿಕಾರಗಳಿಂದ ಶುಲ್ಕ / ಮರುಪಾವತಿ ಸೌಲಭ್ಯ ಪಡೆದಂತಹ ವಿದ್ಯಾರ್ಥಿನಿಯರು ಈ ಶುಲ್ಕ ವಿನಾಯಿತಿ ಸೌಲಭ್ಯಕ್ಕೆ ಅರ್ಹರಿರುವುದಿಲ್ಲ. ಯಾವುದೇ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸದೇ ಇರುವ ಪ್ರಥಮ, ದ್ವಿತೀಯ ಮತ್ತು ಅಂತಿಮ ವರ್ಷದ ಸ್ನಾತಕ ಪದವಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರ ಸಂಖ್ಯೆ ಮತ್ತು ಸಂಖ್ಯೆಗೆ ಅನುಗುಣವಾಗಿ ಅಗತ್ಯವಿರುವ ಅನುದಾನದ ಮೊತ್ತ.
3. ಪ್ರಥಮ ಪದವಿ ವಿದ್ಯಾರ್ಥಿನಿಯರು ಪ್ರವೇಶಾತಿ ಶುಲ್ಕದಲ್ಲಿ ಸರ್ಕಾರಿ ಶುಲ್ಕ ಪ್ರಥಮ ವರ್ಷಕ್ಕೆ ಗರಿಷ್ಠ ರೂ.270/- ಅಥವಾ ವಿದ್ಯಾರ್ಥಿನಿಯರು ಪಾವತಿಸಿರುವ ವಾಸ್ತವಿಕ ಶುಲ್ಕ ಇದರಲ್ಲಿ ಯಾವುದು ಕಡಿಮೆಯೋ ಅದನ್ನು ಪರಿಗಣಿಸುವುದು.
4. ದ್ವಿತೀಯ ಮತ್ತು ತೃತೀಯ ಪದವಿ ವಿದ್ಯಾರ್ಥಿನಿಯರು ಪ್ರವೇಶಾತಿ ಶುಲ್ಕದಲ್ಲಿ ಸರ್ಕಾರಿ ಶುಲ್ಕ ಗರಿಷ್ಠ ರೂ.130/- ಅಥವಾ ವಿದ್ಯಾರ್ಥಿನಿಯರು ಪಾವತಿಸಿರುವ ವಾಸ್ತವಿಕ ಶುಲ್ಕ ಇದರಲ್ಲಿ ಯಾವುದು ಕಡಿಮೆಯೋ ಅದನ್ನು ಪರಿಗಣಿಸುವುದು.
5. ಪ್ರಥಮ, ದ್ವಿತೀಯ ಮತ್ತು ಅಂತಿಮ ಪದವಿ ವಿದ್ಯಾರ್ಥಿನಿಯರಿಗೆ ಅರೆ ಸರ್ಕಾರಿ ಶುಲ್ಕ ಗರಿಷ್ಠ ರೂ.410.00 ಅಥವಾ ವಿದ್ಯಾರ್ಥಿನಿಯರು ಪಾವತಿಸಿರುವ ವಾಸ್ತವಿಕ ಶುಲ್ಕ ಇದರಲ್ಲಿ ಯಾವುದು ಕಡಿಮೆಯೋ ಅದನ್ನು ಪರಿಗಣಿಸುವುದು.

6. ಪದವಿ ವಿದ್ಯಾರ್ಥಿನಿಯರು ಪ್ರವೇಶ / ಎರಡು ಸೆಮಿಸ್ಟರ್‌ಗಳ ಪರೀಕ್ಷಾ ಶುಲ್ಕ ಪಾವತಿಸಿರುವ ವಿಶ್ವವಿದ್ಯಾಲಯ ಶುಲ್ಕಗಳಲ್ಲಿ (ಪರೀಕ್ಷಾ ಪ್ರಮಾಣ ಪತ್ರ ಮತ್ತು ಘಟಿಕೋತ್ಸವ ಶುಲ್ಕಗಳನ್ನು ಹೊರತುಪಡಿಸಿ) ವಾರ್ಷಿಕ ಗರಿಷ್ಠ ರೂ.3,500.00 ಅಥವಾ ವಿದ್ಯಾರ್ಥಿನಿಯರು ಪಾವತಿಸಿರುವ ವಾಸ್ತವಿಕ ಶುಲ್ಕ ಇದರಲ್ಲಿ ಯಾವುದು ಕಡಿಮೆಯೋ ಅದನ್ನು ಪರಿಗಣಿಸುವುದು.

**ಸ್ನಾತಕೋತ್ತರ ಪದವಿ ವಿದ್ಯಾರ್ಥಿನಿಯರಿಗೆ ಸಂಬಂಧಿಸಿದಂತೆ:**

1. ಪ್ರಥಮ ಹಾಗೂ ಅಂತಿಮ ವರ್ಷದ ಸ್ನಾತಕೋತ್ತರ ಪದವಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರು ಪ್ರಸ್ತುತ ವರ್ಷದಲ್ಲಿ ವಿವಿಧ ವಿದ್ಯಾರ್ಥಿವೇತನಗಳನ್ನು ಪಡೆದಿರುವ ಅಥವಾ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿನಿಯರನ್ನು ಹೊರತು ಪಡಿಸಿ ಶುಲ್ಕ ಮರುಪಾವತಿಗೆ ಅರ್ಹ ವಿದ್ಯಾರ್ಥಿನಿಯರ ಸಂಖ್ಯೆ. ಮತ್ತು ಸಂಖ್ಯೆಗೆ ಅನುಗುಣವಾಗಿ ಅಗತ್ಯವಿರುವ ಅನುದಾನ ಮೊತ್ತ.
2. ಪ್ರಥಮ ಸ್ನಾತಕೋತ್ತರ ಪದವಿ ವಿದ್ಯಾರ್ಥಿನಿಯರು ಪ್ರವೇಶಾತಿ ಶುಲ್ಕದಲ್ಲಿ ಸರ್ಕಾರಿ ಶುಲ್ಕ ಪ್ರಥಮ ವರ್ಷಕ್ಕೆ ಗರಿಷ್ಠ ರೂ.1350/- ಅಥವಾ ವಿದ್ಯಾರ್ಥಿನಿಯರು ಪಾವತಿಸಿರುವ ವಾಸ್ತವಿಕ ಶುಲ್ಕ ಇದರಲ್ಲಿ ಯಾವುದು ಕಡಿಮೆಯೋ ಅದನ್ನು ಪರಿಗಣಿಸುವುದು.
3. ದ್ವಿತೀಯ ಮತ್ತು ತೃತೀಯ ಸ್ನಾತಕೋತ್ತರ ಪದವಿ ವಿದ್ಯಾರ್ಥಿನಿಯರು ಪ್ರವೇಶಾತಿ ಶುಲ್ಕದಲ್ಲಿ ಸರ್ಕಾರಿ ಶುಲ್ಕ ಗರಿಷ್ಠ ರೂ.1130/- ಅಥವಾ ವಿದ್ಯಾರ್ಥಿನಿಯರು ಪಾವತಿಸಿರುವ ವಾಸ್ತವಿಕ ಶುಲ್ಕ ಇದರಲ್ಲಿ ಯಾವುದು ಕಡಿಮೆಯೋ ಅದನ್ನು ಪರಿಗಣಿಸುವುದು.
4. ಎಲ್ಲಾ ವರ್ಷದ ಸ್ನಾತಕೋತ್ತರ ಪದವಿ ವಿದ್ಯಾರ್ಥಿನಿಯರಿಗೆ ಅರೆ ಸರ್ಕಾರಿ ಶುಲ್ಕ ಗರಿಷ್ಠ ರೂ.810.00 ಅಥವಾ ವಿದ್ಯಾರ್ಥಿನಿಯರು ಪಾವತಿಸಿರುವ ವಾಸ್ತವಿಕ ಶುಲ್ಕ ಇದರಲ್ಲಿ ಯಾವುದು ಕಡಿಮೆಯೋ ಅದನ್ನು ಪರಿಗಣಿಸುವುದು.
5. ಸ್ನಾತಕೋತ್ತರ ಪದವಿ ವಿದ್ಯಾರ್ಥಿನಿಯರು ಪ್ರವೇಶ / ಎರಡು ಸೆಮಿಸ್ಟರ್‌ಗಳ ಪರೀಕ್ಷಾ ಶುಲ್ಕ ಪಾವತಿಸಿರುವ ವಿಶ್ವವಿದ್ಯಾಲಯ ಶುಲ್ಕಗಳಲ್ಲಿ (ಪರೀಕ್ಷಾ ಪ್ರಮಾಣ ಪತ್ರ ಮತ್ತು ಘಟಿಕೋತ್ಸವ ಶುಲ್ಕಗಳನ್ನು ಹೊರತುಪಡಿಸಿ) ವಾರ್ಷಿಕ ಗರಿಷ್ಠ ರೂ.5,500.00 ಅಥವಾ ವಿದ್ಯಾರ್ಥಿನಿಯರು ಪಾವತಿಸಿರುವ ವಾಸ್ತವಿಕ ಶುಲ್ಕ ಇದರಲ್ಲಿ ಯಾವುದು ಕಡಿಮೆಯೋ ಅದನ್ನು ಪರಿಗಣಿಸುವುದು.

- **ಪದವಿ ಹಾಗೂ ಸ್ನಾತಕೋತ್ತರ ಪದವಿ ತರಗತಿಗಳಿಗೆ ಪ್ರವೇಶ ಪಡೆದು ವ್ಯಾಸಂಗ ಮಾಡುತ್ತಿರುವ ಅರ್ಹ ವಿದ್ಯಾರ್ಥಿನಿಯರಿಗೆ ಶುಲ್ಕ ಮರುಪಾವತಿಸುವ ಸಂಬಂಧ RECIPIENT ID ಯನ್ನು ಸಿದ್ಧಪಡಿಸಿಕೊಳ್ಳುವಂತೆ ಪ್ರಾಂಶುಪಾಲರುಗಳಿಗೆ ಸೂಚಿಸಲಾಗಿದ್ದು, ಅನುದಾನ ಬಿಡುಗಡೆಗೊಂಡ ನಂತರ ಶೀಘ್ರವಾಗಿ ಅರ್ಹ ವಿದ್ಯಾರ್ಥಿನಿಯರ ಖಾತೆಗೆ ಖಜಾನೆ-2 ಮುಖಾಂತರ ಶುಲ್ಕ ಮರುಪಾವತಿಸುವಂತೆ ಸೂಚಿಸಲಾಗಿದೆ.**
- **ಹೆಚ್ಚುವರಿ ಅನುದಾನವನ್ನು ಕೋರದೆ, ಅರ್ಹ ವಿದ್ಯಾರ್ಥಿನಿಯರಿಗೆ ಅಗತ್ಯವಿರುವಷ್ಟು ಅನುದಾನವನ್ನು ಮಾತ್ರ Upload ಮಾಡುವುದು ಎಂದು ಕಟ್ಟುನಿಟ್ಟಾಗಿ ಸೂಚಿಸಲಾಗಿದೆ.**

6/1/22

**ಕಾಲೇಜು ಶಿಕ್ಷಣ ನಿರ್ದೇಶಕರು**

ಇವರಿಗೆ,

1) ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಅಗತ್ಯ ಕ್ರಮಕ್ಕಾಗಿ.
2) ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಮತ್ತು ಕಲಬುರಗಿ.
3) ಮಾಹಿತಿ ಅಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು – ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು ತಿಳಿಸಲಾಗಿದೆ.
4) ಕಛೇರಿ ಪ್ರತಿ.

# ದೃಢೀಕರಣ ಪತ್ರ

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ, ಹಿಂದುಳಿದ ಹಾಗೂ ಅಲ್ಪಸಂಖ್ಯಾತ ಮತ್ತು ಇತರೆ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿನಿಯರನ್ನು ಹೊರತುಪಡಿಸಿ, ಉಳಿದ ವಿದ್ಯಾರ್ಥಿನಿಯರ ಮಾಹಿತಿಯನ್ನು ಹೆಣ್ಣು ಮಕ್ಕಳ ಶುಲ್ಕ ಮರುಪಾವತಿಗೆ ಸಲ್ಲಿಸುತ್ತಿದ್ದು, ಹಾಗೂ ಈ ಶುಲ್ಕ ಮರುಪಾವತಿಗೆ ಸಲ್ಲಿಸಿದ ವಿದ್ಯಾರ್ಥಿನಿಯರು ಪ್ರಸಕ್ತ ಸಾಲಿನಲ್ಲಿ ಯಾವುದೇ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಲು ಅವಕಾಶ ನೀಡುವುದಿಲ್ಲ ಎಂದು ದೃಢೀಕರಿಸುತ್ತೇನೆ.

ಸಹಿ/-
ಪ್ರಾಂಶುಪಾಲರು

| Eligible Girl Students Information for Fee Reimbursement, 2021-22 | | | | | | | | | |
|---|---|---|---|---|---|---|---|---|---|
| **College Name:** | | | | | | | | | |
| **Region Name:** | | | | | | | | | |
| **College K2 Code:** | | | | | | | | | |
| **College ID:** | | | | | | | | | |
| **Sl.NO** | **Girl Student Name** | **Aadhaar Number** | **UG/PG** | **Course Name** | **Studying Year** | **GOVERNMENT Fee Reimbursement (in Rupees)** | **QUASI-GOVERNMENT Fee Reimbursement (in Rupees)** | **UNIVERSITY Admission and Exam Fee Reimbursement (in Rupees)** | **Total Fee Reimbursement (in Rupees)** |
| 1 | | | | | | | | | |
| 2 | | | | | | | | | |
| 3 | | | | | | | | | |
| 4 | | | | | | | | | |
| 5 | | | | | | | | | |
| 6 | | | | | | | | | |
| | | | | | **Total** | | | | |

**Based on number of Girls Students for Fees Reimbursement in your college, increase the number of rows in this**